

# ಎವರ್‌ಗ್ರೀನ್ ಎಮರಾಲ್ಡ್!



**ಪಚ್ಚೆ, ಎಮರಾಲ್ಡ್, ಹಸಿರು ಕಲ್ಲು ಎಂಬುದು ಆಭರಣ ಪ್ರಪಂಚದಲ್ಲಿ ಬಹಳ ಅಮೂಲ್ಯವಾದದ್ದು. ಶಾಂತಿ ಹಾಗೂ ಸಮೃದ್ಧಿಯ ಪ್ರತೀಕದಂತಿರುವ ಜೆಮ್ ಸ್ಟೋನ್ ಒಡವೆಗಳು ಎಂದೆಂದಿಗೂ ಫ್ಯಾಷನ್ ಪ್ರಪಂಚದಲ್ಲಿ ಔಟ್‌ಡೇಟೆಡ್ ಆಗುವುದೇ ಇಲ್ಲ. ಹೀಗಾಗಿ ಎಮರಾಲ್ಡ್ ಒಡವೆಗಳು ಯಾವತ್ತಿಗೂ ಎವರ್‌ಗ್ರೀನ್!**

**■ ಉಮಾ ಅನಂತ್**

ಹಸಿರು ಬಣ್ಣ ಇಷ್ಟಪಡುವ ಮಹಿಳೆಯರ ಒಡವೆ ತಿಜೋರಿಯನ್ನು ಒಮ್ಮೆ ತೆಗೆದುನೋಡಿ. ಅಲ್ಲಿ ಹಲವು ವೈವಿಧ್ಯಗಳ ನೆಕ್ಲೇಸ್, ಕಿವಿಯೋಲೆ, ಉಂಗುರ, ಬಳೆ, ಪೆಂಡೆಂಟ್‌ಗಳು ಎಮರಾಲ್ಡ್ ಎಂಬ ಹರಳಿನಿಂದ ತಯಾರಿಸಿದ್ದು ಮಿಂಚುತ್ತಿರುತ್ತಿರುತ್ತದೆ. ಆಭರಣ ಪ್ರಪಂಚದಲ್ಲಿ ಎವರ್‌ಗ್ರೀನ್ ಹೀರೊ ಆಗಿ ಮೆರೆಯುತ್ತಿರುವ ಪಚ್ಚೆಕಲ್ಲು ಮಹಿಳೆಯರಿಗೆ ಅದೆಂಥ ಆಕರ್ಷಣೆ!

ಪಚ್ಚೆಯು ಒಂದು ಅಪರೂಪದ ಮತ್ತು ದುಬಾರಿ ಬೆಲೆಯ ಹರಳಿನ ಕಲ್ಲು. ಇದು ಬೆರಿಲಿಯಂ, ಅಲ್ಯೂಮಿನಿಯಂ ಮತ್ತು ಸಿಲಿಕೇಟ್ ಇರುವ ಖನಿಜದ ವೈವಿಧ್ಯ. ಕಡು ಹಸುರಿನಿಂದ ಕೂಡಿದ ಪಚ್ಚೆಯಲ್ಲಿ ಕ್ರೋಮಿಯಂ ಕೂಡ ಇರುತ್ತದೆ ಎನ್ನುವುದು ತಜ್ಞರ ಅಭಿಮತ.

ವೈಜ್ಞಾನಿಕವಾಗಿ ನೋಡಿದಾಗ ಪಚ್ಚೆ ಹರಳಿನ ಬಣ್ಣವನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ವರ್ಣ, ಶುದ್ಧತ್ವ ಮತ್ತು ಛಾಯೆ. ಬಣ್ಣಗಳ ಚಕ್ರದಲ್ಲಿ ಹಳದಿ ಮತ್ತು ನೀಲಿಯು ಹಸಿರಿನ ಮಗ್ಗುಲಿನಲ್ಲಿ ಕಂಡು ಬರುತ್ತದೆ, ಪಚ್ಚೆಯಲ್ಲಿ ಇವು ಸಾಧಾರಣವಾಗಿ ದ್ವಿತೀಯ ವರ್ಣವಾಗಿರುತ್ತದೆ. ಜನ್ಮರಾಶಿಗೆ ಅನುಗುಣವಾಗಿ ಪಚ್ಚೆಯನ್ನು ನಕ್ಷತ್ರದ ಅನುಗುಣವಾಗಿ 'ಲಕ್ಕಿಸ್ಟೋನ್' ಎಂದೂ ಪರಿಗಣಿಸಲಾಗಿದೆ.

## ಉಡುಪಿಗೆ ಮ್ಯಾಚಿಂಗ್ ಒಡವೆ

ಎಮರಾಲ್ಡ್ ಅನ್ನು ಮಿಕ್ಸ್ ಅಂಡ್ ಮ್ಯಾಚ್ ಪರಿಕಲ್ಪನೆಗೆ ಸರಿಯಾಗಿ ಹೊಂದಿಸಬಹುದು. ಸಾಮಾನ್ಯವಾಗಿ ಹಸಿರು–ಹಳದಿ ಪ್ರಿಂಟ್ಸ್ ಇರುವ ಬಾಂದನಿ ಉಡುಪುಗಳು, ಸ್ಲೀವ್‌ಲೆಸ್ ಸಾಲಿಡ್ ಬ್ಲ್ಯಾಕ್ ಕಲರ್ ಉಡುಪಿನ ಜತೆಗೆ ಸಿಲ್ವರ್ ಜಿಯೊಮೆಟ್ರಿಕ್ ಪ್ಯಾಟರ್ನ್ ಇರುವ ನೆಕ್‌ಪೀಸ್, ಸಿಲ್ವರ್ ಮೆಟಾಲಿಕ್ ಪೆಂಡೆಂಟ್, ನೆಕ್ಲೇಸ್, ವುಡನ್ ಬ್ಯಾಂಗಲ್ ಸೆಟ್, ಆ್ಯಂಟಿಕ್ ಫಿನಿಷ್ ಸಿಲ್ವರ್ ಟೆಂಪಲ್ ನೆಕ್ಲೇಸ್ ಮುಂತಾದ ಎಮರಾಲ್ಡ್ ಒಡವೆಯೊಂದಿಗೆ ಚೆನ್ನಾಗಿ ತಳಕು ಹಾಕುವಂತಿವೆ.

ಸಾಂಪ್ರದಾಯಿಕ ಉಡುಪುಗಳಾದ ಗ್ರೀನ್ ಕಾಟನ್ ಫ್ಲೋರಲ್ ಹ್ಯಾಂಡ್ ಪ್ರಿಂಟೆಂಡ್ ಟಾಪ್, ಬ್ಲೂ ಜೀನ್ಸ್, ಮಲ್ಟಿ ಕಲರ್ ಎಂಬ್ರಾಯಿಡರಿ



## ಅತಿ ದೊಡ್ಡ ಪಚ್ಚೆ

ಗಚಾಲಾ ಪಚ್ಚೆ ಎಂಬುದು ಜಗತ್ತಿನ ಅತಿ ದೊಡ್ಡ ಪಚ್ಚೆಗಳಲ್ಲಿ ಒಂದು. ಈ ಕಲ್ಲು 1967ರಲ್ಲಿ ಕೊಲಂಬಿಯಾದ ಗಚಾಲಾದ ಲಾ ವೇಗಾ ಡಿ ಸ್ಯಾನ್ ಜ್ಯೂಆನ್ ಗಣಿಯಲ್ಲಿ ಕಂಡುಬಂದಿತು. ವಾಷಿಂಗ್ಟನ್ ಡಿಸಿಯ ಸ್ಮಿತ್ ಸೋನಿಯನ್ ಸಂಸ್ಥೆಯಲ್ಲಿರುವ ನ್ಯಾಷನಲ್ ಮ್ಯೂಸಿಯಂ ಆಫ್ ನ್ಯಾಚುರಲ್ ಹಿಸ್ಟರಿಯಲ್ಲಿ ಇದನ್ನು ಇಡಲಾಗಿದೆ.